# ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಬ್ಯಾಡಗಿ

## ಪಿ.ಸಿ.ಆರ್. ನಂಃ 75 / 2022

**ಪಿಡಬ್ಲ್ಯೂಃ** 1

ಮಾನ್ಯ ಸರ್ವೋಚ್ಚ ನ್ಯಾಯಾಲಯವು ಇಂಡಿಯನ್ ಬ್ಯಾಂಕ್ ಅಸೋಸಿಯನ್ ಕೇಸಿನಲ್ಲಿ ಮಾಡಿದ ಆದೇಶದಂತೆ ಸಾಕ್ಷಿಯ ಹೇ ಳಿಕೆಯ ಪ್ರಮಾಣ ಪತ್ರವನ್ನು ಸ್ವೀಕರಿಸಿ ಸಾಕ್ಷಿಯನ್ನು ಪಿ.ಡಬ್ಲ್ಯೂ.1 ಎಂದು ಪರಿಗಣಿಸಲಾಯಿತು.

ದಿನಾಂಕಃ 21.01.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ನನ್ನ ಸಾಕ್ಷಿ ಹೇಳಿಕೆಯನ್ನು ನಾನೇ ಮಾಹಿತಿ ನೀಡಿ ಬರೆಸಿದ್ದು, ಅದರಲ್ಲಿರುವ ಸಂಗತಿಗಳೆಲ್ಲಾ ಸತ್ಯವಿದ್ದು, ಅದರಲ್ಲಿರುವ ಸಹಿಗಳು ನನ್ನವೇ ಇರುತ್ತವೆ ಎಂದು ಪ್ರಮಾಣೀಕರಿಸುತ್ತೇನೆ.

2. 09.06.2022 ಎಂದು ದಿನಾಂಕವನ್ನು ನಮೂದಿಸಿ ಆರೋಪಿಯು ರೂ. 2,35,954/-ಗಳಿಗೆ ನನಗೆ ನೀಡಿದ ಜನತಾ ಸೇವಾ ಕೋ -ಅಪರೇಟಿವ್, ಬ್ಯಾಂಕ್ ಲಿಮಿಟೆಡ್, ಮೂಡಳಪಾಳ್ಯ, ಬೆಂಗಳೂರು ಶಾಖೆ ಚೆಕ್ ಸಂಖ್ಯೆ 737472 ಹಾಜರು ಪಡಿಸಿದ್ದು, ಅದನ್ನು ನಿಪಿ-1 ಎಂದು, ಆರೋಪಿಯ ಸಹಿಯನ್ನು ನಿಪಿ-1(ಎ) ಎಂದು, ಆರೋಪಿಯ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ದಿನಾಂಕಃ 03.09.2022 ರಂದು ಭಾರತೀಯ ಸ್ಟೇಟ್ ಬ್ಯಾಂಕ್, ಶಾಖೆ ಬ್ಯಾಡಗಿ ಇವರು ನೀಡಿದ ಹಿಂಬರಹವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ-2 ಎಂದು, ಆರೋಪಿತನಿಗೆ ಹಣವನ್ನು ಮರು ಪಾವತಿಸುವಂತೆ ನನ್ನ ವಕೀಲರ ಮೂಲಕ ಆರೋಪಿಗೆ ದಿನಾಂಕಃ 23.09.2022 ರಂದು ಆರೋಪಿಗೆ ಕಳುಹಿಸಿದ ನೋಟಿಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ನಿಪಿ-3 ಎಂದು, ಸದರಿ ನೋಟಿಸನ್ನು ಕಳುಹಿಸಿದ ಬಗ್ಗೆ

ಅಂಚೆ ರಶೀದಿಯನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ–4 ಎಂದು, ನಿಪಿ–3 ನ್ನು ಸ್ವೀಕರಿಸಿದ ಬಗ್ಗೆ ಅಂಚೆ ಸ್ವೀಕೃತಿ ಪತ್ರ ವನ್ನು ಹಾಜರು ಪಡಿಸಿದ್ದು, ಅದನ್ನು ನಿಪಿ–5 ಎಂದು ಗುರುತಿಸಲಾಯಿತು.

ಆರೋಪಿ ಕಲಂ 138 ಎನ್.ಐ.  ಆ್ಯಕ್ಟ ಅಡಿಯಲ್ಲಿ ಅಪರಾಧವೆಸಗಿದ್ದು ಆತನ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ಶಿಕ್ಷೆ ವಿಧಿಸಿಬೇಕೆಂದು ನಾನು ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಂತೆ ದೂರನ್ನು ಸಲ್ಲಿಸಿದ್ದು, ನನಗೆ ಸೂಕ್ತ ಪರಿಹಾರ ಕೊಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ತೆ ನ್ಯಾ ನನ್ನ ಹೇ ಬೆ ಮಾಡಲಾಗಿದೆ)

ನನ್ನ ಸಮಕ್ಷಮ,

ಓ.ಹೇ.ಕೇ.ಸರಿ.ಇದೆ.

ಸಹಿ/–

ಜೆಎಂಎಫ್‌ಸಿ, ಬ್ಯಾಡಗಿ.